# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಪ್ರಶ್ನೆ ಸಂಖ್ಯೆ (ಚುಕ್ಕೆ ಗುರುತಿನ) | 1036 | 1036 |
| ಮಾನ್ಯ ವಿಧಾನ ಪರಿಷತ್ತಿನ ಸದಸ್ಯರ ಹೆಸರು | ಶ್ರೀ ಮಾನೆ ಶ್ರೀನಿವಾಸ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) | Shri Mane Srinivas (Elected from local bodies) |
| ಉತ್ತರಿಸಬೇಕಾದ ದಿನಾಂಕ | 16.03.2020 | 16.03.2020 |
| ಉತ್ತರಿಸುವವರು | ಮಾನ್ಯ ಉಪ ಮುಖ್ಯಮಂತ್ರಿಗಳು, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಸಚಿವರು | Hon'ble Deputy Chief Minister & Minister for Skill Development Entrepreneurship and Livelihood dept. |
| **ಪ್ರಶ್ನೆ** | **ಉತ್ತರ** | **Answer** |
| (ಅ) ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಪ್ರಾಯೋಜಿಕತ್ವದಲ್ಲಿ ನಿರುದ್ಯೋಗಿಗಳಿಗೆ ಸ್ವಯಂ ಉದ್ಯೋಗ ಕಲ್ಪಿಸಲು ವಿವಿಧ ಇಲಾಖೆಗಳು, ಸ್ಥಳೀಯ ಸಂಸ್ಥೆಗಳು, ನಿಗಮ ಮತ್ತು ಮಂಡಳಿಗಳು ಹಾಗೂ ಇನ್ನಿತರ ಸಂಸ್ಥೆಗಳಿಂದ ಅನುಷ್ಠಾನಗೊಳಿಸಲಾಗುತ್ತಿರುವ ಸ್ವಯಂ ಉದ್ಯೋಗ ಯೋಜನೆಗಳ ಹೆಸರು, ಅರ್ಹತೆಗಳನ್ನು ಒಳಗೊಂಡಂತೆ ಸಂಪೂರ್ಣ ಮಾಹಿತಿ ಒದಗಿಸುವುದು: | ಅ) ರಾಜ್ಯದಲ್ಲಿ ಈಗಾಗಲೇ ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ಔಪಚಾರಿಕ ಶಿಕ್ಷಣ ಪಡೆಯದ ಮತ್ತು ಸ್ನಾತಕೋತ್ತರ ಪದವಿ ಹೊಂದಿದ 18 ರಿಂದ 35 ವಯೋಮಿತಿಯೊಳಗಿನ ಯುವಜನತೆಗೆ ಕೌಶಲ್ಯ ವೃತ್ತಿಗನುಗುಣವಾದ ಜಾಬ್‌ರೋಲ್‌ಗಳಲ್ಲಿ ತರಬೇತಿ ನೀಡಲಾಗುತ್ತಿದೆ. ಸದರಿ ಯೋಜನೆಯನ್ನು ಭಾರತ ಸರ್ಕಾರದ ರಾಷ್ಟ್ರೀಯ ಕೌಶಲ್ಯ ಅರ್ಹತಾ ಚೌಕಟ್ಟು (NSQF) ಹಾಗೂ ಕೈಗಾರಿಕಾ ವೃತ್ತಿಗನುಗುಣವಾಗಿ ನಿಗಧಿಪಡಿಸಿದ ಮಾನದಂಡಗಳ ಅನುಗುಣವಾಗಿ ಜಾರಿಗೊಳಿಸಲಾಗುತ್ತಿದೆ. ರಾಜ್ಯ ಸರ್ಕಾರದಿಂದ ತರಬೇತಿ ಮತ್ತು ಮೌಲ್ಯಮಾಪನ ವೆಚ್ಚವನ್ನು ಭರಿಸಲಾಗುತ್ತಿದೆ. ಸದರಿ ತರಬೇತಿಯನ್ನು ಸರ್ಕಾರಿ / ಸರ್ಕಾರೇತರ ತರಬೇತಿ ಸಂಸ್ಥೆಗಳ ಮುಖಾಂತರ ನೀಡಲಾಗುತ್ತಿದೆ. ತರಬೇತಿಯನ್ನು ಯಶಸ್ವಿಯಾಗಿ ಪೂರೈಸಿದ ನಂತರ ತರಬೇತಿ ಪಡೆದ ಒಟ್ಟು ಅಭ್ಯರ್ಥಿಗಳ ಪೈಕಿ ಶೇ 70 ರಷ್ಟು ಅಭ್ಯರ್ಥಿಗಳಿಗೆ ವೇತನ ಉದ್ಯೋಗ/ಸ್ವಯಂ ಉದ್ಯೋಗ ಕಲ್ಪಿಸಲು ಅವಕಾಶ ಮಾಡಿಕೊಡಲಾಗುತ್ತದೆ. ಉದ್ಯೋಗ ಸೃಷ್ಟಿಸುವ ಸಂಬಂಧ ಪ್ರಾದೇಶಿಕ ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ಉದ್ಯೋಗ ಮೇಳಗಳನ್ನು ಆಯೋಜಿಸಿ ಉದ್ಯೋಗದಾತರನ್ನು ಹಾಗೂ ಉದ್ಯೋಗಾಕಾಂಕ್ಷಿಗಳನ್ನು ಆಹ್ವಾನಿಸಿ ಒಂದೇ ಸೂರಿನಡಿ ಕರೆತಂದು <u>ಕೌಶಲ್‌ಕರ್.ಕಾಂ</u> ನಡಿ ನೋಂದಾಯಿಸಿ ತರಬೇತಿ ಪಡೆದ ಅಭ್ಯರ್ಥಿಗಳಿಗೆ ಹಾಗೂ ಉದ್ಯೋಗಾಕಾಂಕ್ಷಿಗಳಿಗೆ ಉದ್ಯೋಗಾವಕಾಶ ಕಲ್ಪಿಸಲಾಗುತ್ತಿದೆ. | **a) CM's Kaushalya Karnataka Yojane** is being implemented in State to impart Skill to youth between age group of 18 to 35 Years with no formal education and up to Post Graduate candidates as per job role. The Skill Training is provided to the candidates based on the National Skill Qualification Framework (NSQF) and as per the standards set by the industry. The Government shall bear the training and assessment cost. The Training is imparted through Govt / Non-Govt training providers. On successful completion of training, the scheme stipulates providing 70 % of the trained candidates either wage or self employment. Job fair will be conducted throughout the state brining employers and aspirants under one ambit by registering in the Koushalkar.com website. Thus enabling the Employment. |
| | ಆ) ರಾಜ್ಯದಲ್ಲಿ ಈಗಾಗಲೇ ಪ್ರಧಾನಮಂತ್ರಿಗಳ ಕೌಶಲ್ಯ ವಿಕಾಸ ಯೋಜನೆ **2.0** (ಕೇಂದ್ರ ಪ್ರಾಯೋಜಿತ ರಾಜ್ಯ ನಿರ್ವಹಣೆ ಯೋಜನೆಯನ್ನು 2016–20) 18 ರಿಂದ 35 ವಯೋಮಿತಿಯೊಳಗಿನ ಯುವಜನತೆಗೆ ಕೌಶಲ್ಯ ತರಬೇತಿಯನ್ನು ನೀಡಿ ಉದ್ಯೋಗ ನಿಯುಕ್ತಿ ಹೊಂದಿ ಜೀವನೋಪಾಯ ಒದಗಿಸಲು ಅನುಷ್ಠಾನಗೊಳಿಸಲಾಗುತ್ತಿದೆ.<br>ಸದರಿ ಯೋಜನೆಯನ್ನು ಭಾರತ ಸರ್ಕಾರದ ಕೌಶಲ್ಯ ಅಭಿವೃದ್ಧಿ | **b) Pradhan Mantri Kaushal Vikas Yojana** (PMKVY2.0 CSSM, 2016-2020) is being implemented in the State for youth between the age group of 18 to 35 Years to impart skill training for making them employable and earn their livelihood. |

| | | |
|---|---|---|
| | ಮಂತ್ರಾಲಯದ ಹಾಗೂ ರಾಷ್ಟ್ರೀಯ ವಲಯ ಕೌಶಲ್ಯ ಪರಿಷತ್ತಿನ ಮಾನದಂಡಗಳ ಅನುಗುಣವಾಗಿ ಅನುಷ್ಠಾನಗೊಳಿಸಲಾಗುತ್ತಿದೆ.<br>ಎಲ್ಲಾ ತರಬೇತುದಾರ ಸಂಸ್ಥೆಗಳು ರಾಷ್ಟ್ರೀಯ ಕೌಶಲ್ಯ ಅಭಿವೃದ್ಧಿ ನಿಗಮದಿಂದ ಮಾನ್ಯತೆ ಪಡೆಯಬೇಕಾಗಿದೆ.<br>ತರಬೇತಿಯನ್ನು ಯಶಸ್ವಿಯಾಗಿ ಪೂರೈಸಿದ ನಂತರ ತರಬೇತಿ ಪಡೆದ ಒಟ್ಟು ಅಭ್ಯರ್ಥಿಗಳ ಪೈಕಿ ಶೇ 70 ರಷ್ಟು ಅಭ್ಯರ್ಥಿಗಳಿಗೆ ವೇತನ ಉದ್ಯೋಗ/ಸ್ವಯಂ ಉದ್ಯೋಗ ಕಲ್ಪಿಸಲು ಅವಕಾಶ ಮಾಡಿಕೊಡಲಾಗಿದೆ. | The scheme is implemented as per MSDE and NSQF norms.<br>All training providers (TPs) are required to get accredited from NSDC.<br>On successful completion of training, the scheme stipulates providing 70 % of the trained candidates either wage or self employment. |
| | ಇ) ಡೇ-ನಲ್ಮ್: | **c) DAY-NULM:** |
| | • ವೈಯಕ್ತಿಕ ಸ್ವಯಂ ಉದ್ಯೋಗ ಕಾರ್ಯಕ್ರಮವು ಡೇ-ನಲ್ಮ್ ಅಭಿಯಾನದ ಉಪ ಘಟಕವಾಗಿದೆ. ಇದರಡಿ ರೂ.2.00 ಲಕ್ಷದವರೆಗೆ ಬ್ಯಾಂಕಿನಿಂದ ಸಾಲ ಸೌಲಭ್ಯವನ್ನು ಕಲ್ಪಿಸಲಾಗುವುದು ಹಾಗೂ ಬ್ಯಾಂಕಿನಿಂದ ಸಾಲ ಮಂಜೂರಾದ ಮೊತ್ತಕ್ಕೆ ಅನುಗುಣವಾಗಿ ಶೇ.7 ಕ್ಕಿಂತ ಮೇಲ್ಪಟ್ಟ ಬಡ್ಡಿ ದರವನ್ನು ಸಹಾಯಧನವನ್ನಾಗಿ ಅಭಿಯಾನದಿಂದ ಭರಿಸಲಾಗುವುದು.<br>• ಸ್ವ-ಸಹಾಯ ಗುಂಪುಗಳಿಗೆ ರೂ.10.00 ಲಕ್ಷದವರೆಗೆ ಬ್ಯಾಂಕಿನಿಂದ ಸಾಲ ಸೌಲಭ್ಯವನ್ನು ಕಲ್ಪಿಸಲಾಗುವುದು ಹಾಗೂ ಬ್ಯಾಂಕಿನಿಂದ ಸಾಲ ಮಂಜೂರಾದ ಮೊತ್ತಕ್ಕೆ ಅನುಗುಣವಾಗಿ ಶೇ.7 ಕ್ಕಿಂತ ಮೇಲ್ಪಟ್ಟ ಬಡ್ಡಿ ದರವನ್ನು ಸಹಾಯಧನವನ್ನಾಗಿ ಅಭಿಯಾನದಿಂದ ಭರಿಸಲಾಗುವುದು.<br>• ಆಯ್ಕೆಯಾದ ಫಲಾನುಭವಿಗಳಿಗೆ ಉದ್ಯಮಶೀಲತಾಭಿವೃದ್ಧಿ ತರಬೇತಿ ಕಾರ್ಯಕ್ರಮವನ್ನು ನೀಡಲಾಗುವುದು.<br>• ನಗರ ಮಹಿಳಾ ಸ್ವ ಸಹಾಯ ಸಂಘಗಳಿಗೆ ರೂ.1.00 ಲಕ್ಷದವರೆಗೆ ಬ್ಯಾಂಕ್ ಕ್ರೆಡಿಟ್ ಲಿಂಕೇಜ್ ಮಾಡಲಾಗುವುದು ಹಾಗೂ ಬ್ಯಾಂಕಿನಿಂದ ಸಾಲ ಮಂಜೂರಾದ ಮೊತ್ತಕ್ಕೆ ಅನುಗುಣವಾಗಿ ಶೇ.7 ಕ್ಕಿಂತ ಮೇಲ್ಪಟ್ಟ ಬಡ್ಡಿ ದರದ ಜೊತೆಗೆ ಹೆಚ್ಚುವರಿಯಾಗಿ ಶೇಕಡ 3ರಷ್ಟು ಬಡ್ಡಿ ದರವನ್ನು ಸಹಾಯಧನವನ್ನಾಗಿ ಸಹ ಅಭಿಯಾನದಿಂದ ಭರಿಸಲಾಗುವುದು. | • Individual Self Employment programme is one of the component of the DAY-NULM Mission. Under this programme Rs.2.00 Lakhs loan will be provided by the bank under interest subvenison scheme over and above 7% interest for the sanctioned loan. The interest over and above 7% will be borne by the Mission.<br>• For SHGs Rs.10.00 lakhs loan will be provided by the bank under interest subvenison scheme over and above 7% interest for the sanctioned loan. The interest over and above 7% will be borned by the Mission<br>• Entrepreneurship Development Programme (EDP) training will be imparted to the selected beneficiaries.<br>• For urban women SHGs bank credit linkage up to Rs.1.00 lakh will be provided under interest subvenison scheme additional 3% interest over and above 7% will be borne by the Mission for the sanctioned loan. |
| | **ಅರ್ಹತೆಗಳು:** | **Eligibility:** |
| | • ನಗರ ವ್ಯಾಪ್ತಿಯ ಅರ್ಹ ಬಡ ಫಲಾನುಭವಿಗಳಾಗಿರಬೇಕು.<br>• ಫಲಾನುಭವಿಗಳ ಕುಟುಂಬದ ವಾರ್ಷಿಕ ಆದಾಯ ರೂ.1.20 ಲಕ್ಷದ ಒಳಗಿರಬೇಕು.<br>• ಬಡತನ ರೇಖೆಗಿಂತ ಕೆಳಗಿರುವ ಫಲಾನುಭವಿಯೆಂದು ಗುರುತಿಸಲು ರೇಷನ್ ಕಾರ್ಡ್, ಜಾತಿ ಮತ್ತು ಆದಾಯ ಪ್ರಮಾಣ ಪ್ರಮಾಣ ಪತ್ರ ದಾಖಲಾತಿಗಳನ್ನು ಪರಿಗಣಿಸಲಾಗುತ್ತಿದೆ. | • Beneficiary should be Urban Poor<br>• Annual income should be below Rs.1.20 Lakhs<br>• For indentification of BPL beneficiaries Ration card, Income & Caste certificate are being considered. |

| | | |
|---|---|---|
| | ಈ) ಎನ್.ಆರ್.ಎಲ್.ಎಂ.:<br>ಸ್ವಯಂ ಉದ್ಯೋಗ ಕಲ್ಪಿಸುವ ಸಲುವಾಗಿ ಆರ್.ಸೆ.ಟಿ. / ರೂಡ್.ಸೆ.ಟಿ ಗಳಿಂದ ತರಬೇತಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಇದು ಶೇ.100 ರಷ್ಟು ಕೇಂದ್ರ ಸರ್ಕಾರ ಪ್ರಾಯೋಜಿತ ಯೋಜನೆಯಾಗಿದೆ.<br><br>**ಮಾನದಂಡಗಳು:** ಬಡತನ ರೇಖೆಯಿಂದ ಕೆಳಗಿರುವವರಿಗೆ 18–35 ವಯೋಮಿತಿ ಇದೆ. ಆದರೆ ದುರ್ಬಲ ವರ್ಗದ ಪರಿಶಿಷ್ಟ ಪಂಗಡದ ಗುಂಪುಗಳಿಗೆ ಮಾತ್ರ 45 ವರ್ಷದವರೆಗೆ ಸಡಿಲಿಸಿ ವಯೋಮಿತಿ ನಿಗದಿಪಡಿಸಲಾಗಿದೆ. ವಿಶೇಷಚೇತನರ, ಜೀತದಾಳುಗಳ ಗುಂಪುಗಳಿಗೆ ಮತ್ತು ಕಳ್ಳಸಾಗಣೆಕೆಗೆ ಬಲಿಯಾಗಿ ನೊಂದ ಮಹಿಳೆಯರಿಗೆ 16 ವರ್ಷ ಇದ್ದರೂ ಸಹ ಯೋಜನೆಯ ಪ್ರಯೋಜನ ಪಡೆಯಲು ಅರ್ಹರಿರುವರು.<br><br>ಉ) **ಸಿಡಾಕ್:** ಉದ್ಯಮಶೀಲತಾ ಅಭಿವೃದ್ಧಿ ತರಬೇತಿ ಕಾರ್ಯಕ್ರಮವನ್ನು ಸಿಡಾಕ್ ಸಂಸ್ಥೆಯಿಂದ ಅನುಷ್ಠಾನಗೊಳಿಸಲಾಗುತ್ತಿದೆ.<br>**ಅರ್ಹತೆ**<br>18–40 ವಯೋಮಿತಿಯ ಸ್ವಂತ ಉದ್ಯೋಗ ಪ್ರಾರಂಭಿಸುವ ಆಸಕ್ತರು, ಸ್ವ-ಸಹಾಯ ಸಂಘದ ಸದಸ್ಯರು, ಪದವಿಧರರು, ತಾಂತ್ರಿಕ ಅಭ್ಯರ್ಥಿಗಳು ಹಾಗೂ ಇತರ ಆಸಕ್ತರಿಗೆ ಉದ್ಯಮಶೀಲತಾಭಿವೃದ್ಧಿ ತರಬೇತಿ ಕಾರ್ಯಕ್ರಮವನ್ನು ಪಡೆಯಲು ಅರ್ಹರಿರುವರು. ಸ್ವಾವಲಂಭಿಯಾಗಲು ಅನುವಾಗುವಂತೆ ಸರ್ಕಾರದ ಯೋಜನೆಗಳ ಬಗ್ಗೆ ಮಾಹಿತಿ ಸಹ ನೀಡಲಾಗುವುದು. | d) **NRLM:**<br>By RSETIs and RUDSETIs training programmes are being implemented for taking up Self-employments. This is a Central plan scheme with 100% GoI assistance.<br><br>**Eligibility:**<br>SHGs having beneficiaries between 18-35 age group who are Bellow Poverty Line and for Primitive Tribal Groups (PTG) with age group up to 45 years. Specially challenged women, bonded labourers and victims of human trafficking the lower age limit is reduced to 16 years to get the benefit.<br><br>e) **CEDOK:** Entrepreneurship Development Training programme is being implemented through CEDOK.<br><br>**Eligibility**<br>Persons in the age group of 18-40 years who wants to become entrepreneur, SHG groups, Degree holders, and Technical candidates are eligible. |
| (ಆ) ನಿರುದ್ಯೋಗಿಗಳಿಗೆ ಸ್ವಯಂ ಉದ್ಯೋಗ ಕಲ್ಪಿಸಲು ಹಾವೇರಿ, ಗದಗ ಮತ್ತು ಧಾರವಾಡ ಜಿಲ್ಲೆಗಳಲ್ಲಿ ಕೈಗೊಳ್ಳಲಾದ ಅನುಷ್ಠಾನದ ಸ್ಥಿತಿಗತಿಗಳ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಇಲಾಖಾವಾರು ಒದಗಿಸುವುದು: | **ಅ) ಅನುಬಂಧ – 1** ಸಿ.ಎಂ.ಕೆ.ಕೆ.ವೈ<br>**ಆ) ಅನುಬಂಧ - 2** ಪಿ.ಎಂ.ಕೆ.ವಿ.ವೈ.<br>**ಇ) ಅನುಬಂಧ - 3** ಡೇ–ನಲ್ಮ್<br>**ಈ) ಅನುಬಂಧ - 4** ಎನ್.ಆರ್.ಎಲ್.ಎಂ.<br>ಉ) ಅನುಬಂಧ - 5 ಸಿಡಾಕ್ | a) Annexure - 1 for CMKKY<br>b) Annexure - 2 for PMKKY<br>c) Annexure - 3 for DAY-NULM<br>d) Annexure - 4 for NRLM<br>e) Annexure – 5 for CEDOK |
| (ಇ) ನಿರುದ್ಯೋಗಿಗಳಿಗೆ ಸ್ವಯಂ ಉದ್ಯೋಗ ಕಲ್ಪಿಸುವ ಯೋಜನೆಗಳನ್ನು ಹೆಚ್ಚಿನ ರೀತಿಯಲ್ಲಿ ಪರಿಣಾಮಕಾರಿಯಾಗಿ ಜಾರಿಗೊಳಿಸಲು ಸರ್ಕಾರ ಕೈಗೊಳ್ಳುತ್ತಿರುವ ಕ್ರಮಗಳೇನು? | ಅ) ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆಯನ್ನು ಸರ್ಕಾರಿ ಆದೇಶ ಸಂಖ್ಯೆ: ಕೌಉಜೀಇ 51 ಕೌಗುಇ 2019, ದಿ:01–02–2019ರ ಮಾರ್ಗಸೂಚಿಗಳಂತೆ ಹಾಗೂ ಅಧಿಕಾರಯುಕ್ತ ಸಮಿತಿಯ ಶಿಫಾರಸ್ಸುಗಳನ್ವಯ ಅವಶ್ಯಕತೆಗನುಗುಣವಾಗಿ ಬದಲಾವಣೆಗಳೊಂದಿಗೆ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲಾಗುತ್ತಿದೆ.<br>ಆ) 2020–21ನೇ ಸಾಲಿನಲ್ಲಿ ಗ್ರಾಮೀಣ ಯುವಜನತೆಗೆ ಅನುಕೂಲವಾಗುವಂತೆ ವಸತಿ ಸಹಿತ ಕೌಶಲ್ಯ ತರಬೇತಿ ನೀಡಲು ಕ್ರಮವಹಿಸಲಾಗಿದೆ. | a) The CMKKY is implemented as per guidelines issued by Government vide GO No. SDEL 51 SSM 2019 dt.01.02.2019 and changes recommended by the Empowered Committee as per requirement for effective implementation of the scheme.<br>b) Action has been initiated for the year 2020-21 to cover residential training programme to benefit rural youth. |

| | | |
|---|---|---|
| | ಇ) ಡೇ–ನಲ್ಮ್:<br>◦ ನಗರ ಸ್ಥಳೀಯ ಸಂಸ್ಥೆಯ ಮಟ್ಟದಲ್ಲಿ ಸ್ವೀಕೃತವಾಗುವ ಅರ್ಜಿಗಳನ್ನು ಪರಿಶೀಲಿಸಿ ಸೂಕ್ತ ಪ್ರಸ್ತಾವನೆಗಳನ್ನು ಬ್ಯಾಂಕಿಗೆ ಸಲ್ಲಿಸುವ ಸಂಬಂಧ ಸಂಬಂಧಿಸಿದ ನಗರ ಸ್ಥಳೀಯ ಸಂಸ್ಥೆಯ ಆಯುಕ್ತರು/ ಪೌರಾಯುಕ್ತರು/ಮುಖ್ಯಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಟಾಸ್ಕ್‌ಫೋರ್ಸ್ ಸಮಿತಿಯನ್ನು ರಚಿಸಲಾಗಿರುತ್ತದೆ.<br>◦ ಬಡ್ಡಿ ಸಹಾಯಧನವು ತ್ವರಿತವಾಗಿ ನಿಗಧಿತ ಸಮಯಕ್ಕೆ ಸಂಬಂಧಪಟ್ಟ ಫಲಾನುಭವಿಗಳ ಬ್ಯಾಂಕ್ ಖಾತೆಗೆ ಪೈಸಾ ಪೋರ್ಟಲ್ ಮೂಲಕ ಕೇಂದ್ರಿಕೃತವಾಗಿ ನೇರವಾಗಿ ವರ್ಗಾವಣೆ ಮಾಡಲಾಗುತ್ತಿರುತ್ತದೆ.<br>◦ ಕಾಲ ಕಾಲಕ್ಕೆ ಸಾಲ ವಿತರಣೆಯನ್ನು ಖಚಿತಪಡಿಸಿಕೊಳ್ಳಲು ಜಿಲ್ಲಾ ಮಟ್ಟದ ಬ್ಯಾಂಕರ್ಸ್ ಕಮಿಟಿ (DLBC) & ರಾಜ್ಯ ಮಟ್ಟದ ಬ್ಯಾಂಕರ್ಸ್ ಕಮಿಟಿ (SLBC) ಸಭೆಗಳನ್ನು ನಿಯಮಿತವಾಗಿ ಆಯೋಜಿಸಲಾಗುತ್ತಿರುತ್ತದೆ. | c) **DAY-NULM:**<br>◦ Taskforce committee is formed under the chairmanship of respective ULB Commissioner, Municipal Commissioner and Chief Officer for verification and approval of proposals.<br>◦ Through PAISA Portal interest subsidy is being provided to the respective beneficiary's bank account.<br>◦ District Level Bankers Committee (DLBC) & State Level Bankers Committee (SLBC) meetings are conducted on a regular basis to ensure timely loan disbursal. |
| | ಈ) ಎನ್.ಆರ್.ಎಲ್.ಎಂ.: ಪ್ರತಿ ಮೂರು ತಿಂಗಳಿಗೊಮ್ಮೆ ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಮತ್ತು ಸಂಬಂಧಪಟ್ಟ ಆರ್‌ಸೆಟಿ ತರಬೇತಿ ಸಂಸ್ಥೆಯ ನಿರ್ದೇಶಕರುಗಳು ಡಿಎಲ್‌ಆರ್‌ಸಿ ಸಭೆ ನಡೆಸಿ ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲಾಗುತ್ತಿದೆ. | d) **NRLM:** Meetings are held once in 3 months under the Chairmanship of CEOs of ZP and Directors of concerned RSETIs with representative of DLBC for effective implementation of the programme. |
| | ಉ) ಸಿಡಾಕ್: ಉದ್ಯಮಶೀಲತಾ ಅಭಿವೃದ್ಧಿ ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಮುಂದಿನ ವರ್ಷದಿಂದ ಹೆಚ್ಚಿನ ಅವಧಿಯ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು. | e) **CEDOK:** For effective implementation of Entrepreneurship Development Programme longer duration courses are proposed to be taken from next year. |

ಸಂಖ್ಯೆ: **ಕೌಉಬಜೀಇ 12 ಉಜೀಪ್ರ 2020**

(ಡಾ॥ ಸಿ.ಎನ್. ಅಶ್ವಥ್‌ನಾರಾಯಣ)
ಉಪ ಮುಖ್ಯಮಂತ್ರಿಗಳು ಮತ್ತು ಉನ್ನತ ಶಿಕ್ಷಣ,
ಐಟಿ/ಬಿಟಿ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ
ಮತ್ತು ಜೀವನೋಪಾಯ ಇಲಾಖೆ ಸಚಿವರು.

ಶ್ರೀ. ಮಾನೆ ಶ್ರೀನಿವಾಸ್, ವಿಧಾನ ಪರಿಷತ್ತಿನ ಸದಸ್ಯರು ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:1036 ರ ಅನುಬಂಧ-1

ಮುಖ್ಯಮಂತ್ರಿ ಕೌಶಲ್ಯ ಕರ್ನಾಟಕ ಯೋಜನೆ (ಸಿ.ಎಂ.ಕೆ.ಕೆ.ವೈ.) ಯಡಿ ಪ್ರಯೋಜನ ಪಡೆದ ಫಲಾನುಭವಿಗಳ ವಿವರ

**Dharwad District**

| Year | Government | Non-Government | Total |
|---|---|---|---|
| **2017-18** | 626 | 0 | 626 |
| **2018-19** | 145 | 1997 | 2142 |
| **2019-20** | 910 | 794 | 1704 |
| **Total** | **1681** | **2791** | **6516** |

**Gadag District**

| Year | Government | Non-Government | Total |
|---|---|---|---|
| **2017-18** | 154 | 0 | 154 |
| **2018-19** | 0 | 176 | 176 |
| **2019-20** | 1652 | 146 | 1798 |
| **Total** | **1806** | **322** | **2128** |

**Haveri District**

| Year | Government | Non-Government | Total |
|---|---|---|---|
| **2017-18** | 20 | 0 | 20 |
| **2018-19** | 170 | 100 | 270 |
| **2019-20** | 0 | 393 | 393 |
| **Total** | 190 | 493 | **1421** |

ಶ್ರೀ. ಮಾನೆ ಶ್ರೀನಿವಾಸ್, ವಿಧಾನ ಪರಿಷತ್ತಿನ ಸದಸ್ಯರು ಇವರ
ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:1036 ರ ಅನುಬಂಧ-2

ಪ್ರಧಾನ ಮಂತ್ರಿ ಕೌಶಲ್ಯ ವಿಕಾಸ ಯೋಜನೆ (ಪಿ.ಎಂ.ಕೆ.ವಿ.ವೈ.)
ಯಡಿ ಪ್ರಯೋಜನ ಪಡೆದ ಫಲಾನುಭವಿಗಳ ವಿವರ

**Dharwad District**

| Year | Non-Government |
|---|---|
| 2017-18 | 0 |
| 2018-19 | 149 |
| 2019-20 | 869 |
| **Total** | **1018** |

**Gadag District**

| Year | Non-Government |
|---|---|
| 2017-18 | 0 |
| 2018-19 | 60 |
| 2019-20 | 480 |
| **Total** | **540** |

**Haveri District**

| Year | Non-Government |
|---|---|
| 2017-18 | 0 |
| 2018-19 | 0 |
| 2019-20 | 928 |
| **Total** | **928** |

ಶ್ರೀ. ಮಾನೆ ಶ್ರೀನಿವಾಸ್, ವಿಧಾನ ಪರಿಷತ್ತಿನ ಸದಸ್ಯರು ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:1036 ರ

ಅನುಬಂಧ-3

ಡೇ-ನಲ್ಮ್ ಯೋಜನೆಯ ಸ್ವಯಂ ಉದ್ಯೋಗ ಕಾರ್ಯಕ್ರಮದಡಿಯಲ್ಲಿ ಪ್ರಯೋಜನ ಪಡೆದ ಗುಂಪು ಹಾಗೂ ವೈಯಕ್ತಿಕ ಫಲಾನುಭವಿಗಳ ಜಿಲ್ಲಾವಾರು ವಿವರ

| District | Component Name | Target | Achievement |
|---|---|---|---|
| | **2017-18** | | |
| Dharwad | Self Employment Programme - Individual | 467 | 442 |
| | Self Employment Programme - Groups | 79 | 12 |
| | SHG LINKAGE | 2 | 52 |
| Gadag | Self Employment Programme - Individual | 90 | 53 |
| | Self Employment Programme Group | 4 | 0 |
| | SHG LINKAGE | 23 | 32 |
| Haveri | Self Employment Programme - Individual | 62 | 44 |
| | Self Employment Programme Group | 2 | 1 |
| | SHG LINKAGE | 16 | 3 |
| | **2018-19** | | |
| Dharwad | Self Employment Programme - Individual | 85 | 73 |
| | Self Employment Programme - Groups | 9 | 2 |
| | SHG LINKAGE | 56 | 31 |
| Gadag | Self Employment Programme - Individual | 69 | 14 |
| | Self Employment Programme - Groups | 9 | 2 |
| | SHG LINKAGE | 50 | 4 |
| Haveri | Self Employment Programme - Individual | 34 | 33 |
| | Self Employment Programme - Groups | 4 | 2 |
| | SHG LINKAGE | 24 | 13 |
| | **2019-20** | | |
| Dharwad | Self Employment Programme - Individual | 361 | 0 |
| | Self Employment Programme - Groups | 147 | 0 |
| | SHG LINKAGE | 279 | 0 |
| Gadag | Self Employment Programme - Individual | 65 | 0 |
| | Self Employment Programme - Groups | 5 | 0 |
| | SHG LINKAGE | 48 | 0 |
| Haveri | Self Employment Programme - Individual | 58 | 5 |
| | Self Employment Programme - Groups | 3 | 1 |
| | SHG LINKAGE | 47 | 2 |

ಶ್ರೀ. ಮಾನೆ ಶ್ರೀನಿವಾಸ್, ವಿಧಾನ ಪರಿಷತ್ತಿನ ಸದಸ್ಯರು ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:1036 ರ ಅನುಬಂಧ-4

ಎನ್.ಆರ್.ಎಲ್.ಎಂ. ಯೋಜನೆಯ ಸಂಜೀವಿನಿ-ಕೆಎಸ್‌ಎಲ್‌ಆರ್‌ಪಿಎಸ್ ಸಂಸ್ಥೆಯಿಂದ ಸ್ವಯಂ ಉದ್ಯೋಗ ಕಾರ್ಯಕ್ರಮದಡಿಯಲ್ಲಿ ತರಬೇತಿ ಪ್ರಯೋಜನ ಪಡೆದ ಫಲಾನುಭವಿಗಳ 3 ಜಿಲ್ಲೆಗಳ ವಿವರ

| District | RSETI/RUDSETI Name | 2017-18 | | 2018-19 | | 2019-20 | |
|---|---|---|---|---|---|---|---|
| | | Targets | Achievement | Targets | Achievement | Targets | Achievement |
| Dharwad | RUDSETI Dharwad | 935 | 966 | 860 | 629 | 825 | 849 |
| Gadaga | SBI Gadag | 750 | 763 | 750 | 664 | 750 | 776 |
| Haveri | VB Haveri | 750 | 806 | 750 | 442 | 625 | 549 |
| **Total** | | **2435** | **2535** | **2360** | **1735** | **2200** | **2174** |

ಶ್ರೀ.ಮಾನೆ ಶ್ರೀನಿವಾಸ್, ವಿಧಾನ ಪರಿಷತ್ತಿನ ಸದಸ್ಯರು ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:1036ರ ಅನುಬಂಧ – 5

## ಸಿಡಾಕ್ ಸಂಸ್ಥೆಯಿಂದ ಹಮ್ಮಿಕೊಂಡ ಕಾರ್ಯಕ್ರಮಗಳ ಜಿಲ್ಲಾವಾರು ವಿವರಗಳು

### 2017–18 ನೇ ಸಾಲಿನ

| ಕ್ರ. ಸಂ. | ಜಿಲ್ಲೆಗಳು | ಸರ್ಕಾರದ ವಿವಿಧ ಇಲಾಖೆ / ನಿಗಮಗಳ ಫಲಾನುಭವಿಗಳಿಗಾಗಿ ಮೂರು ದಿನಗಳ ವ್ಯವಹಾರ ಅಭಿವೃದ್ಧಿ ಮಾರ್ಗದರ್ಶಿ ಕಾರ್ಯಕ್ರಮ | ವಿಶೇಷ ಘಟಕ ಯೋಜನೆಯಡಿ ಪರಿಶಿಷ್ಟ ಜಾತಿ ಫಲಾನುಭವಿಗಳಿಗೆ 2/3 ದಿನಗಳ ವ್ಯವಹಾರ ಅಭಿವೃದ್ಧಿ ಮಾರ್ಗದರ್ಶಿ ಕಾರ್ಯಕ್ರಮ | ಗಿರಿಜನ ಉಪ ಯೋಜನೆಯಡಿ ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ 2/3 ದಿನಗಳ ವ್ಯವಹಾರ ಅಭಿವೃದ್ಧಿ ಮಾರ್ಗದರ್ಶಿ ಕಾರ್ಯಕ್ರಮ |
|---|---|---|---|---|
| 1 | ಧಾರವಾಡ | 243 | 583 | – |
| 2 | ಗದಗ | 142 | 278 | 124 |
| 3 | ಹಾವೇರಿ | 117 | 30 | 370 |
| | ಒಟ್ಟು | **502** | **891** | **494** |

### 2018–19 ನೇ ಸಾಲಿನ

| ಕ್ರ. ಸಂ. | ಜಿಲ್ಲೆಗಳು | ಕಾಲೇಜು ವಿದ್ಯಾರ್ಥಿಗಳಿಗೆ, ಭಾವಿ ಉದ್ಯಮಶೀಲರಿಗೆ, ಉದ್ಯಮಶೀಲರಾಗಲು ಇಚ್ಛೆಯುಳ್ಳ ಯುವಕ ಯುವತಿಯರಿಗೆ ಒಂದು ದಿನದ ಔಟ್ ರೀಚ್ ತರಬೇತಿ ಕಾರ್ಯಕ್ರಮಗಳು | ಉದ್ಯಮಶೀಲರಾಗಲು ಇಚ್ಛೆಯುಳ್ಳ ಯುವಕ ಯುವತಿಯರಿಗೆ 2/3 ದಿನಗಳ ರೆಡಿ ಮತ್ತು ಸ್ಟಡಿ ತರಬೇತಿ ಕಾರ್ಯಕ್ರಮಗಳು | ಆರು ದಿನಗಳ ದಿಶಾ ಗೋ ಉದ್ಯಮಶೀಲತಾಭಿವೃದ್ಧಿ ಕಾರ್ಯಕ್ರಮ |
|---|---|---|---|---|
| 1 | ಧಾರವಾಡ | 5009 | 1002 | 77 |
| 2 | ಗದಗ | 2575 | 500 | 37 |
| 3 | ಹಾವೇರಿ | 2425 | 169 | 7 |
| | ಒಟ್ಟು | **10009** | **1671** | **121** |

### 2019–20 ನೇ ಸಾಲಿನ

| ಕ್ರ. ಸಂ. | ಜಿಲ್ಲೆಗಳು | ಒಂದು ದಿನದ ಔಟ್ ರೀಚ್ ತರಬೇತಿ | ಎರಡು/ಮೂರು ದಿನಗಳ ರೆಡಿ ಮತ್ತು ಸ್ಟಡಿ ತರಬೇತಿ | ಆರು ದಿನಗಳ ಇಡಿಪಿ |
|---|---|---|---|---|
| 1 | ಧಾರವಾಡ | 400 | 370 | 210 |
| 2 | ಗದಗ್ | 300 | 265 | 80 |
| 3 | ಹಾವೇರಿ | 226 | 254 | 40 |
| ಒಟ್ಟು | | **926** | **889** | **330** |